ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯಂತ್ ರಾಜ್ ಹಾಗೂ ವಕ್ಫ್ ಖಾತೆ ಮಂತ್ರಿಗಳು).—

ಅ) ಎನ್. ಆರ್. ಡಬ್ಲ್ಯೂ. ಎಸ್	—	೧೭
ಎ. ಆರ್. ಡಬ್ಲ್ಯೂ. ಎಸ್.	—	೮
ಒಟ್ಟು		೨೫

ಅ) ಹಲಸೂರು ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ ೮೭-೮೮ನೇ ಸಾಲಿನಲ್ಲಿ ಮಂಜೂರಾಗಿದೆ ೮೮-೮೯ನೇ ವರ್ಷದ ಅಂತ್ಯದಲ್ಲಿ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಮಳಲಿಚನ್ನೇನಹಳ್ಳಿ ಮತ್ತು ಹೆಚ್. ರಂಗಾಪುರ ಗ್ರಾಮಗಳ ನೀರು ಸರಬರಾಜು ಯೋಜನೆ ಜಿಲ್ಲಾ ಪರಿಷತ್ ವತಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿಲ್ಲ.

ಇ) ಉತ್ತರ ''ಅ''

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಯೇ ಒಂದೂ ಇವರು ಕೊಟ್ಟಿರತಕ್ಕ ಉತ್ತರವೇ ಒಂದು. ನಾನು ಕೇಳಿದ ಪ್ರಶ್ನೆ ಎನ್. ಆರ್. ಡಬ್ಲ್ಯೂ. ಎಸ್. ಯೋಜನೆಯನ್ನು ಅರ್ಧ ಕಿಲೋ ಮೀಟರ್, ಮುಕ್ಕಾಲು ಕಿಲೋ ಮೀಟರಿನಲ್ಲಿ ಬರತಕ್ಕ ೪-೫ ಹಳ್ಳಿಗಳನ್ನು ಸೇರಿಸಿ, ಈ ಯೋಜನೆಯನ್ನು ಜಾರಿಗೆ ಕೊಡಿ ಎಂದು ಕೇಳುತ್ತಿದ್ದೇನೆ. ಹಲಸೂರು ಮತ್ತು ಮಳಲಿಚನ್ನೇನಹಳ್ಳಿ ಗ್ರಾಮಗಳು ಸಂತ್ತ ೪-೪ ಗ್ರಾಮಗಳು ಮುಕ್ಕಾಲು ಕಿಲೋಮೀಟರೊಳಗೆ ಬರುತ್ತವೆ. ಜಿಲ್ಲಾ ಪರಿಷತ್ತಿನಿಂದ ಈ ಯೋಜನೆ ಸರ್ಕಾರಕ್ಕೆ ಬಂದಿದೆ. ಇದಕ್ಕೆ ಸರ್ಕಾರದಲ್ಲಿ ಅಪ್ರೂವಲ್ ಕೊಡುತ್ತಾ ಇಲ್ಲ. ಈ ಯೋಜನೆಗೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎಂದು ಕೇಳಿದ್ದೇನೆ, ಇದಕ್ಕೆ ಸಮರ್ಪಕವಾದ ಉತ್ತರಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮಾಭಿವೃದ್ಧಿ ಸಚಿವರ ಪರವಾಗಿ).—ಮಾನ್ಯ ಉಪಾಧ್ಯಕ್ಷರೇ, ಮಳಲಿ ಚೆನ್ನೇನಹಳ್ಳಿ ಗ್ರಾಮದ ಜನಸಂಖ್ಯೆ ೧೯೮೧ರ ಜನಗಣತಿ ಪ್ರಕಾರ ೧೬೪೧ ಇದ್ದುದು ಈಗ ೧೮೪೧ ಆಗಬಹುದು ಎಂಬ ನಿರೀಕ್ಷೆ ಇದ್ದು, ೧೯೯೫-೯೦ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಈಗಾಗಲೇ ಸೂಚನೆ ಮಾಡಲಾಗಿದೆ. ಇನ್ನು ರಂಗಾಪುರ ಕೇವಲ ೫೬೧ ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿಗೆ ನಳದ ಯೋಜನೆಯನ್ನು ಆಳವಡಿಸುವುದಕ್ಕಾಗುವುದಿಲ್ಲ. ಏಕೆಂದರೆ, ಈ ಯೋಜನೆಯ ಮಾರ್ಗಸೂಚಿಯ ಪ್ರಕಾರ ಅಲ್ಲಿಗೆ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದಂತೆ, ಗುಂಪು ಗ್ರಾಮಗಳನ್ನು ಕ್ರೋಢೀಕರಿಸಿ, ಒಂದು ಯೋಜನೆಯನ್ನು ಮಾಡಬೇಕೆಂಬ ಪ್ರಸ್ತಾಪ ಇದ್ದರೆ, ಇದರ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—೪-೫ ಹಳ್ಳಿಗಳು ಒಂದು ಕಿಲೋ ಮೀಟರ್ ಒಳಗೇ ಬರುತ್ತವೆ. ಇಂತಹ ಹಳ್ಳಿಗಳನ್ನು ಸೇರಿಸಿ, ಕೊಡಬಹುದು. ಆದರೆ ಜನಗಣತಿ ಪ್ರಕಾರ ಕೊಡುವುದಕ್ಕಾಗುವುದಿಲ್ಲ ವೆಂದು ಹೇಳುತ್ತಾರೆ. ಈ ಯೋಜನೆ ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ಅಪ್ರೂವಲ್ ಆಗಿದೆ. ಇದನು ಏಕೆ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಸರ್ಕಾರದವರು ಏಕೆ ಇಂತಹವುಗಳಿಗೆ ಅನುಮತಿ ಕೊಡಬಾರದು?

ಶ್ರೀ ಎಂ. ಪಿ. ಪ್ರಕಾಶ್.—ಇದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಹಂಚುವ ಬಗ್ಗೆ.

೪೮೫. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಾಣ ಮಾಡಿದ ನಿವೇಶನಗಳು ಮತ್ತು ಕಟ್ಟಿದ ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿ ಇರುವ ಧೋರಣೆಯನ್ನು ಅನುಸರಿಸಲಾಗುತ್ತಿದೆಯೇ ?

ಆ) ಅರ್ಜಿಗಳನ್ನು ಸ್ವೀಕರಿಸುವ ಸಲುವಾಗಿ ಹೊರಡಿಸಿದ ಪ್ರಕಟಣೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾಗಿಟ್ಟ ನಿವೇಶನ ಮನೆಗಳ ಸಂಖ್ಯೆಯನ್ನು ಪ್ರಕಟಿಸಲಾಗಿತ್ತಿದೆಯೇ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಆ) ಹೌದು.

ಆ) ಪ್ರಕಟಣೆಯಲ್ಲಿ ನಿವೇಶನ/ಮನೆಗಳ ಹಂಚಿಕೆಯನ್ನು ನಿಯಮಾವಳಿ ಪ್ರಕಾರ ಮಾಡಲಾಗುವುದೆಂದು ಸ್ಪಷ್ಟವಾಗಿ ಪ್ರಕಟಿಸಲಾಗುತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಗೌರವ-ರ್ನೇ ಸಾಲಿನ ಆಯವ್ಯಯ ಪಟ್ಟಿಯ ಚರ್ಚೆಯಲ್ಲಿ ನಾನು ಭಾಗಿಯಾಗಿದ್ದೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಸಂಸ್ಥೆ ಬಗ್ಗೆ ಚರ್ಚೆ ಮಾಡುತ್ತಿರುವಾಗ, ನಾನು ಒಂದು ಪ್ರಶ್ನೆ ಕೇಳಿದೆ. ಆಗ ಶ್ರೀಮಾನ್ ಪ್ರಕಾಶ್‌ರವರು ಮಂತ್ರಿಗಳಾಗಿದ್ದರು. ಬಿ.ಡಿ.ಎ. ನವರು ಕಟ್ಟಿರತಕ್ಕ ಮನೆಗಳು, ಮತ್ತೆ ಹಂಚತಕ್ಕ ಸೈಟುಗಳಲ್ಲಿ ಮೀಸಲಾತಿಯ ಬಗ್ಗೆ ಸರಿಯಾದ ಕಟ್ಟುನಿಟ್ಟಿನ ಪರಿಪಾಲನೆ ಇಲ್ಲವೆಂದು ಕೇಳಿದ್ದೆ. ಆಗ ಸರಿಯಾಗಿ ಮಾಡುತ್ತೇವೆಂದು ಹೇಳಿದ್ದರು, ಈಗ ಮಾನ್ಯ ದೇಶಪಾಂಡೆಯವರು ಮಂತ್ರಿಗಳಾಗಿದ್ದಾರೆ, ಅವರು ಮಾಡುತ್ತೇನೆಂದು ಹೇಳುತ್ತಾರೆ. ೮೦೦ ಮನೆಗಳನ್ನು ನಾಗಶೆಟ್ಟಿಹಳ್ಳಿಯಲ್ಲಿ ಕಟ್ಟಿದ್ದಾರೆ. ಅಲ್ಲಿ ನಿಮ್ನ ವರ್ಗದವರಿಗೆ ಮನೆಗಳನ್ನು ಕಟ್ಟಿಲ್ಲ. ಖಾಲಿ ಇದ್ದ ಮನೆಗಳಿಗೆ ಅರ್ಜಿ ಹಾಕಿದರೆ ಕೊಡುತ್ತೇವೆಂದು ಹೇಳಿದರು. ಮೀಸಲಾತಿ ಪ್ರಕಾರವೇ ಕೊಡುತ್ತೇವೆಂದು ಹೇಳಿದರು. ಅದಕ್ಕನುಗುಣವಾಗಿ, ಕೆಲವು ಅರ್ಜಿದಾರರು ಬಿ. ಡಿ. ಎ.ಗೆ ಅರ್ಜಿ ಕೊಟ್ಟಿದ್ದಾರೆ. ಆದರೆ ಇವುಗಳನ್ನು ಬಿ. ಡಿ. ಎ. ನವರು ಪರಿಗಣನೆಗೆ ತೆಗೆದುಕೊಂಡಿಲ್ಲ. ಕಾರಣ ಏನು ಹೇಳುತ್ತಿದ್ದಾರೆಂದರೆ, ಸರ್ಕಾರದಿಂದ ನಿರ್ದೇಶನಗಳು, ಆರ್ಡರುಗಳು ಬರದಹೊರತು ನಾವು ಅನುಷ್ಠಾನಗೊಳಿಸುವುದಿಲ್ಲ, ಅಸೆಂಬ್ಲಿಯಲ್ಲಿ ಹೇಳತಕ್ಕ ಮಾತು ಒಂದು ಕಡೆಯಾದರೆ, ನಮಗೆ ಸರಿಯಾದ ನಿರ್ದೇಶನ ಬೇಕೆಂದು ಹೇಳಿದರು. ಎವಿಡೆನ್ಸ್ ಆಕ್ಟ್ ಪ್ರಕಾರ, ಅಸೆಂಬ್ಲಿ ನಿಯಮಾವಳಿ ಪ್ರಕಾರ ಯಾವ ಮಂತ್ರಿಗಳು ಹೇಳಿಕೆ ಕೊಡುತ್ತಾರೆ, ಅದು conclusive proof of the statement of the stand of the Government and that should be followed by all the officers and the machinery of the Government. This is what we have done. ಈಗ ಆಲ್ಲಿ ಏನಾಗಿದೆ ಎಂದರೆ, ಸರ್ಕಾರದಿಂದ ನಿರ್ದೇಶನ ಬರದೇ ಹೋದರೆ ನಾವು ಮಾಡುವುದಿಲ್ಲ ಎಂದು ಹೇಳುತ್ತಾರೆ. ಈಗಾಗಲೇ ಕಮಿಟ್‌ಮೆಂಟ್ ಆಗಿದೆ, ಅರ್ಜಿಗಳೂ ಇವೆ, ಆದ್ದರಿಂದ ತಾವು, ಖಾಲಿ ಇರತಕ್ಕ ಮನೆಗಳ ಬಗ್ಗೆ ಬಗ್ಗೆ ನಿರ್ದೇಶನ ಕೊಡುತ್ತೀರಾ ? ಎರಡನೆಯದಾಗಿ, ಮನೆ ನಿವೇಶನಗಳನ್ನು ಹಂಚಲು ನೋಟೀಫಿಕೇಷನ್ ಕರೆಯುವಾಗ ನಿರ್ದಿಷ್ಟವಾಗಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಇಂತಿಷ್ಟು ಮೀಸಲಾತಿಯನ್ನು ನಾವು ಕೊಡುತ್ತೇವೆ ಎಂದು ಹೇಳಿ ಬಿಟ್ಟು ಪ್ರಕಟಣೆ ಮಾಡುತ್ತೆವೆಂದು ಈಗಾಗಲೇ ಒಪ್ಪಿದ್ದೀರಿ. ಅದರಂತೆ ತಾವು ಈ ಪ್ರಕಟಣೆ ಮಾಡುವುದಕ್ಕೆ ಒಪ್ಪುತೀರಾ ಎಂದು ಕೇಳುತ್ತೇನೆ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂಥ ಬಸವಲಿಂಗಪ್ಪನವರು ಕೊಟ್ಟಿರುವ ಸಲಹೆ ನಿಜವಾಗಿಯೂ ಒಳ್ಳೆಯ ಸಲಹೆಯಾಗಿದೆ. ಮಾನ್ಯ ಎಂ. ಪಿ. ಪ್ರಕಾಶ್‌ರವರು ಇಲಾಖೆ ಚಿಂತಿಕೆಗಳ ಮೇಲೆ ಮಾತನಾಡುವಾಗ ಇದರ ಬಗ್ಗೆ ಒಪ್ಪಿಕೊಂಡಿದ್ದಾರೆ. ಉದ್ಯೋಗಾವಕಾಶದ ಬಗ್ಗೆ ನೋಟಿಫಿಕೇಶನ್ ಮಾಡುವಾಗ, ಸರಕಾರದ ಕಾಯಿದೆಯಲ್ಲಿ ಎಸ್.ಸಿ.,ಎಸ್.ಟಿ.ಗಳಿಗೆ ಇಂತಿಷ್ಟು ಪರ್ಸೆಂಟೇಜ್ ಎಂದು ಇದ್ದರೂ ಕೂಡಾ, ಆದನ್ನು ಪುನಃ ಪ್ರಕಟಣೆ ಮಾಡುತ್ತೇವೆ. ಆದೇ ರೀತಿ ಇಲ್ಲೂ ಮಾಡುವ ಅವಶ್ಯಕತೆ ಇದೆ. ಇದನ್ನು ಪ್ರಕಟಣೆ ಮಾಡುವುದಕ್ಕೆ ನಾನು ಆದೇಶ ಕೊಡುತ್ತೇನೆ. ಇನ್ನು ಮುಂದೆ ಬಿ.ಡಿ.ಎ. ನವರು ನಿವೇಶನ ಹಂಚಿಕೆ ಮಾಡುವಾಗ ಸ್ಪಷ್ಟವಾಗಿ ಎಸ್.ಸಿ.ಎಸ್.ಟಿ.ಗಳಿಗೆ ಇಂತಿಷ್ಟು ನಿವೇಶನ ಎಂದು ಪ್ರಕಟಣೆ ಮಾಡುತ್ತೇವೆ. ಮನೆ ಹಂಚಿಕೆ ಬಗ್ಗೆ ಯಾರು ಯಾರು ಮನೆ ಕೇಳಿ ಅರ್ಜಿ ಕೊಟ್ಟಿದ್ದಾರೆ, ಅವರಿಗೆ ಮನೆಗಳನ್ನು ಕೊಟ್ಟಿದ್ದೇವೆ. ಮನೆ ಹಂಚಿಕೆಯಲ್ಲೂ ಸಹ ಎಸ್.ಸಿ.,ಎಸ್.ಟಿ. ಗಳಿಗೆ ಎಷ್ಟು ಸೇರಬೇಕು ಎಂಬುದನ್ನು ಪ್ರಕಟಣೆ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ. ನನ್ನನ್ನು ಅವರು ಅರ್ಥ ಮಾಡಿಕೊಳ್ಳಲಿಲ್ಲ ಎಂದು ಕಾಣುತ್ತದೆ. ಮನೆ ಕಟ್ಟುವಾಗ ಬಡಿಎ ನವರು ಅರ್ಜಿ ಕರೆದರು. ಅರ್ಜಿಗಳನ್ನು ಯಾರೂ ಹಾಕಲಿಲ್ಲ. ಇದು ಹೈ ಇನ್‌ಕಮ್ ಗ್ರೂಪ್ ಇದ್ದುದರಿಂದ ಹೆಚ್ಚು ಜನ ಅರ್ಜಿ ಹಾಕಲಿಲ್ಲ. ನಂತರವೂ ಕೆಲವು ಮನೆಗಳು ಖಾಲಿ ಇದ್ದವು. ಖಾಲಿ ಇದ್ದಂಥ ಮನೆಗಳಿಗೆ ಎಸ್.ಸಿ. ಜನರು ಅರ್ಜಿ ಹಾಕಿದರೆ ಕೊಡುತ್ತೀರಾ ಎಂದು ನಾನು ಕೇಳಿದೆ.ಕೊಡುತ್ತೇವೆಂದು ಹೇಳಿದ್ದರು. ನಿಯಮಾವಳಿಗಳ ಪ್ರಕಾರ ಅವರಿಗೆ ಎಷ್ಟು ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ. ಈಗ ಯಾರು ಅರ್ಜಿ ಕೊಟ್ಟಿದ್ದಾರೆ ಅವರಿಗೆ ಮನೆಗಳನ್ನು ಕೊಡುವಂತೆ ಕಮಿಷನರ್‌ರವರಿಗೆ ಆದೇಶ ಕೊಡುತೀರಾ ?

ಶ್ರೀ ಆರ್. ವಿ. ದೇಶಪಾಂಡೆ —ನನಗೆ ಬಂದಿರುವ ಮಾಹಿತಿ ಪ್ರಕಾರ ಈ ಮನೆಗಳಿಗೆ ಎಷ್ಟು ಅರ್ಜಿಗಳು ಬರಬೇಕಾಗಿತ್ತೋ ಅಷ್ಟು ಬಂಡಿಲ್ಲ. ಮೂರು ನಾಲ್ಕು ಸಾರಿ ನಾವು ಅಡ್ವರ್‌ಟೈಸ್ ಮಾಡಿರುತ್ತೇವೆ. ಅದರ ನಂತರ ಎಷ್ಟೋ ಜನ ಬ್ಯಾಕ್‌ಔಟ್ ಮಾಡಿದರು. ಆದರೂ ನನ್ನ ಇನ್‌ಫರ್ಮೇಷನ್ ಪ್ರಕಾರ ಯಾರು ಯಾರು ಅರ್ಜಿಕೊಟ್ಟಿದ್ದಾರೆ ಅವರೆಲ್ಲರಿಗೂ ಮನೆಗಳನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಕೊಟ್ಟಿಲ್ಲ, ಕೊಡಿಎಂದು ಹೇಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ.—ನಾನಂ ಏನು ಹೇಳುತ್ತಿದ್ದೇನೆ ಎಂದರೆ ನಾವು ಈ ಮನೆಗಳಿಗೆ ಅಡ್‌ವರ್‌ಟೈಸ್ ಮಾಡಿದಾಗ ಅಪ್ಲಿಕೇಷನ್ಸ್ ಕಡಿಮೆ ಬಂತು. ಕೆಲವು ಅಪ್ಲಿಕೆಂಟ್ಸ್ ಬ್ಯಾಕ್‌ಔಟ್ ಮಾಡಿದರು. ತಾವು ಸೆಲ್ಫ್ ಫೈನಾನ್ಸಿಂಗ್ ಸ್ಕೀಮ್ ಬಗ್ಗೆ ಹೇಳುತ್ತಿದ್ದೀರಿ. ಇದರಲ್ಲಿ ನಂದಿನಿ ಲೇ ಔಟ್‌ನಲ್ಲಿ ಎಸ್.ಸಿ.ಗೆ ೧೫, ಎಸ್.ಟಿ.ಗೆ ೨, ರಾಜಮಹಲ್‌ನಲ್ಲಿ ಎಸ್. ಸಿ.ಗೆ ೨, ದೊಮ್ಮಲೂರಿನಲ್ಲಿ ಎಸ್. ಸಿ.ಗೆ ೨, ಎಸ್. ಟಿ.ಗೆ ಒಂದು ಈ ಪ್ರಕಾರ ಕೊಟ್ಟಿದ್ದೇವೆ. ಯಾರು ಯಾರು ಅರ್ಜಿ ಹಾಕಿದ್ದಾರೆ ಅವರೆಲ್ಲರಿಗೂ ಕೊಟ್ಟಿದ್ದೇವೆ. ತಾವು ಏನು ಹೇಳುತ್ತಿದ್ದೀರಿ ಎಂದರೆ ಯಾವುದೇ ಅರ್ಜಿಗಳನ್ನು ಕೊಟ್ಟರೆ ಕೊಡುತ್ತೀರಾ ಎಂದು ಕೇಳುತ್ತಿದ್ದೀರಿ. ಇಲ್ಲಿ ಮನೆಗಳು ಖಾಲಿ ಇರುವ ಪ್ರಶ್ನೆ ಬರುತ್ತದೆ. ಅದರ ಬಗ್ಗೆ ನನ್ನ ಕಡೆ ಮಾಹಿತಿ ಇಲ್ಲ. ಮನೆ ಎಷ್ಟು ಖಾಲಿ ಇದೆ ಎಂಬ ಪ್ರಶ್ನೆ ಬರುತ್ತದೆ, ಮನೆ ಖಾಲಿ ಇದ್ದರೆ ಪ್ರಾಧಾನ್ಯತೆಯನ್ನು ಕೊಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಒಂದೇ ಒಂದು ಸಣ್ಣ ಪ್ರಶ್ನೆ ಇದೆ. ಸೆಲ್ಫ್ ಫೈನಾನ್ಸಿಂಗ್ ಸ್ಕೀಮ್ ಪ್ರಕಾರ ಮೊದಲು ಹಣ ಕಟ್ಟಬೇಕಾಗಂತ್ತದೆ. ಈ ರೀತಿ ಕಟ್ಟುವಾಗ, ವಿಾಸಲಾತಿ ಅನುಕೂಲ ನೀವು ಮಾಡಿಕೊಡುವಾಗ, ಕೆಲವರಿಗೆ ಹಣ ಕಟ್ಟುವುದು ಕಷ್ಟವಾಗುತ್ತದೆ. ಕೆಲವರಿಗೆ ಆಗುವುದಿಲ್ಲ. ಕಷ್ಟ ಇದ್ದವರಿಗೆ ಟೈಮ್ ರಿಯಾಯಿತಿ ಕೊಡಬೇಕು, ಹಣದ ರಿಯಾಯಿತಿ ಕೊಡಬೇಕು. ಕೊಟ್ಟರೆ ಅವರು ಅರ್ಜಿ ಹಾಕುತ್ತಾರೆ. ನೀವು ೫೦ ಸಾವಿರ ಕೊಡಿ ಎಂದು ಹೇಳಿಬಿಟ್ಟರೆ ಅವರಿಗೆ ಅವರಿಗೆ ೫೦ ಸಾವಿರ ಒಂದೇ ಸಲ ಕೊಡುವುದಕ್ಕೆ ಆಗುವುದಿಲ್ಲ. ಟೈಮ್ ರಿಯಾಯಿತಿ ಮತ್ತು ಹಣದ ರಿಯಾಯಿತಿ ಕೊಟ್ಟು ಅರ್ಜಿ ಹಾಕುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ—ಸೆಲ್ಫ್‌ಫೈನಾನ್ಸಿಂಗ್ ಸ್ಕೀಮ್ ಎಂದರೆ ಯಾರಿಗೆ ಮನೆ ಬೇಕಾಗಿದೆ ಅವರೇ ಹಣ ಕೊಡುತ್ತಾರೆ. ಅದರಿಂದ ಅವರಿಗೆ ಮನೆ ಕಟ್ಟಿ ಕೊಡುತ್ತೇವೆ, ಅಲ್ಲಿ ರಿಯಾಯಿತಿ ಕೊಡುವ ಪ್ರಶ್ನೆ ಬರುವುದಿಲ್ಲ. ಆದರೂ ಎಸ್. ಸಿ., ಎಸ್.ಟಿ. ಯವರಿಗೆ ಇದರಲ್ಲಿ ಏನು ಸಹಾಯ ಮಾಡಬಹುದು ಎಂಬುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಒಂದೇ ಒಂದು ಪ್ರಶ್ನೆ ಅಸೆಂಬ್ಲಿಯಲ್ಲಿ ಮಂತ್ರಿಗಳು ಮಾಡತಕ್ಕಂಥ ಸ್ಟೇಟ್‌ಮೆಂಟ್ಸ್ ಏನಿದೆ ಅದು ಹುಕುಮ್ ಆಥವಾ ಕಾನೂನಾಗಿ ಇರುತ್ತದೋ ಇಲ್ಲವೋ ಎಂಬ ಪ್ರಶ್ನೆ ಬರುತ್ತದೆ. ಇದೆ ಎಂದು ಎವಿಡೆನ್ಸ್ ಆಕ್ಟ್ ಹೇಳುತ್ತದೆ ತಾವು ವಕೀಲರಂ ತವರಂಗೂ ಇದು ಗೊತ್ತಿದೆ ಅದರ ಪ್ರಕಾರ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದರೂ ಸಹ ಅಧಿಕಾರಿಗಳು ಅದನ್ನು ಅನುಸರಿಸುವುದಿಲ್ಲ. ನಮಗೆ ಸ್ಪೆಸಿಫಿಕ್ ಆರ್ಡರ್ಸ್ ಬೇಕೆಂದು ಹೇಳುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಯಾವ ಪ್ರಕಾರ ಭರವಸೆ ಈ ಮನೆಯಲ್ಲಿ ಕೊಡಲಾಗಿದೆಯೋ ಆ ಪ್ರಕಾರ ಬಿ.ಡಿ.ಎ.ಗೆ ಇಮ್ಮೀಡಿಯೇಟ್‌ಲಿ ಡೈರೆಕ್ಷನ್ ಕೊಡುತ್ತೇನೆಂದು ಹೇಳುತ್ತೇನೆ.